ಓ.ಎಸ್.ನಂ.68-2019
ಪಿ.ಡಬ್ಲು-೧

ದಿ: 28.10.2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು</u>: ಪ್ರತಿವಾದಿಗಳ ಪರ ಶ್ರೀಯುತ ಕೆ.ಆರ್.ಎ ವಕೀಲರಿಂದ.

ನನ್ನ ತಾತ ನಲ್ಲಪ್ಪರವರು ನಂಜಪ್ಪರವರಿಂದ ಉದ-24 ಅಡಿ ಮತ್ತು ಪೂಪ-75 ಅಡಿ ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿರುತ್ತಾರೆ. ಆ ರೀತಿ 1963 ನೇ ಸಾಲಿನಲ್ಲಿ ನನ್ನ ತಾತ ನಂಜಪ್ಪರವರಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. ನನ್ನ ತಾತ ನಂಜಪ್ಪರವರಿಂದ ಪಡೆದುಕೊಂಡಿದ್ದ ಆಸ್ತಿಯ ಕ್ರಯ ಪತ್ರದಲ್ಲಿ ನಮೂದಿಸಿದ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂರ್ವಕ್ಕೆ ರಸ್ತೆ ಮತ್ತು ಓಣಿ, ಪಶ್ಚಿಮಕ್ಕೆ ಚಿಕ್ಕಬೈರಪ್ಪ ಮತ್ತು ನಂಜಪ್ಪ ರವರ ವಠಾರ, ಉತ್ತರಕ್ಕೆ ಚೆನ್ನಬಸ್ಸಪ್ಪರವರ ಖಾಲಿ ನಿವೇಶನ, ದಕ್ಷಿಣಕ್ಕೆ ಗೌರಮ್ಮರವರ ವಠಾರ ಇರುತ್ತದೆ. ಆ ರೀತಿ ನಿಮ್ಮ ತಾತ ನಂಜಪ್ಪರವರಿಂದ ಬರೆಸಿಕೊಂಡಿದ್ದ ಕ್ರಯ ಪತ್ರದಲ್ಲಿ ಆಸ್ತಿಯ ಪೂರ್ವ ದಿಕ್ಕಿಗೆ ಕೇವಲ ಓಣಿ ನಮೂದಿಸಲಾಗಿರುತ್ತದೆ ಮತ್ತು ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿಮ್ಮ ತಾತನ ಕ್ರಯ ಪತ್ರದ ಪಶ್ಚಿಮ ದಿಕ್ಕಿನಲ್ಲಿರುವ ಚಿಕ್ಕಬೈರಪ್ಪ ಮತ್ತು ನಂಜಪ್ಪರವರ ವಠಾರ ಎಂದರೆ ಪ್ರಸ್ತುತ ದಾವೆಯ ಪ್ರತಿವಾದಿಗಳ ತಂದೆ ನಂಜಪ್ಪ ಆಗಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯ ಹೆಸರು ನಂಜಪ್ಪ. ಸದರಿ ಪ್ರತಿವಾದಿಯ ತಂದೆ ನಂಜಪ್ಪರವರು ಈ ಮೇಲೆ ಹೇಳಿದ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ನಂಜಪ್ಪ ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಶ್ಚಿಮ ದಿಕ್ಕಿನಲ್ಲಿರುವ ನಂಜಪ್ಪರವರು ಯಾರು ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ೧ನೇ ಪ್ರತಿವಾದಿಯ ತಂದೆ ಎಂದು ನುಡಿಯುತ್ತಾರೆ. ಸದರಿ ನಂಜಪ್ಪರವರ ಆಸ್ತಿಯ ಸಂಖ್ಯೆ ಖಾನೇಷುಮಾರಿ ೧ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಶ್ಚಿಮ ದಿಕ್ಕಿನ ನಂಜಪ್ಪರವರ ಆಸ್ತಿಯ ಕ್ರಮ ಸಂಖ್ಯೆ ಯಾವುದು ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸಂಖ್ಯೆ 75 ಎಂದು ನುಡಿಯುತ್ತಾರೆ. ಸದರಿ ಪಶ್ಚಿಮ ದಿಕ್ಕಿನ ನಂಜಪ್ಪರವರ ಆಸ್ತಿ ಸಂಖ್ಯೆ 75 ಜಮೀನಿನ ಸ್ವಾಧೀನದಲ್ಲಿ ೧ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಖರೀದಿಸಿದ ಆಸ್ತಿಯ ಪೂಪ-75 ಅಡಿ ಇರುತ್ತದೆ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ಪ್ರಸ್ತುತ ಸದರಿ ಪೂಪ-75 ಅಡಿ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿ. ಸದರಿ ಪೂಪ-75 ಅಡಿ ನಂತರದ ಉಳಿಕೆ ಆಸ್ತಿ ನಂಜಪ್ಪರವರ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಮಗೆ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪೂಪ-75 ಅಡಿ ವಿಸ್ತೀರ್ಣದಲ್ಲಿ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿ.

2. ನಿಮ್ಮ ತಾತ ಕ್ರಯಕ್ಕೆ ಪಡೆದಿರುವ ಪೂಪ-75 ಅಡಿ ವಿಸ್ತೀರ್ಣದ ಕುರಿತು ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಿ ಅಳತೆ ಮಾಡಿ ನಂತರ ಸದರಿ 75 ಅಡಿ ನಂತರದ ಉಳಿಕೆ ಜಮೀನು ಪ್ರತಿವಾದಿಗಳಿಗೆ ಬಿಟ್ಟುಕೊಡುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸದರಿ 75 ಅಡಿ ವಿಸ್ತೀರ್ಣದ ನಂತರವು ನಮಗೆ ಸಂಬಂಧಿಸಿದ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನ್ಯಾಯಾಲಯದ ಆಯುಕ್ತರ ಮೂಲಕ ಅಳತೆ ಮಾಡಿಸಲು ನಿಮಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸಾಕ್ಷಿಯು ಅಳತೆ ಮಾಡಿಸಲು ಬಿಡುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಿ ದಾವಾ ಆಸ್ತಿಯನ್ನು ಅಳತೆ ಮಾಡಿದರೆ ನಾವುಗಳು ಕ್ರಯದ ವಿಸ್ತೀರ್ಣಕ್ಕಿಂತ ಹೆಚ್ಚಿಗಿನ ಆಸ್ತಿ ಇರುವುದು ಕಂಡು ಬರುತ್ತದೆ ಎನ್ನುವ ಸಲುವಾಗಿ ಅಳತೆ ಮಾಡಿಸಲು ಬಿಡುವುದಿಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಸರ್ಕಾರಿ ಓಣಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಓಣಿ ನಂತರ ಚರಂಡಿ ಬರುತ್ತದೆ ಮತ್ತು ಆ ನಂತರ ರಸ್ತೆ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಚರಂಡಿಯ ತುದಿಯಿಂದ ದಾವಾ ಆಸ್ತಿ ಪ್ರಾರಂಭ ಆಗುತ್ತದೆ ಎಂದರೆ ಸರಿಯಲ್ಲ. ನಿಮ್ಮ ಆಸ್ತಿ ಪೂರ್ವ ದಿಕ್ಕಿನ ಎಲ್ಲಿಂದ ಪ್ರಾರಂಭ ಆಗುತ್ತದೆ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಚರಂಡಿ ಆದ ನಂತರ ಓಣಿ ಇರುತ್ತದೆ ಆ ನಂತರ ನನ್ನ ಅಣ್ಣನ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಖಾನೇಷುಮಾರಿ ಆಸ್ತಿ ಸಂಖ್ಯೆ 75 ರ ಮಧ್ಯ ಓಣಿ ಇದೆ ಎಂದು ತೋರಿಸುವ ಕುರಿತು ಯಾವುದಾದರು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಓಣಿ ಈಗಲೂ ಅಸ್ತಿತ್ವದಲ್ಲಿರುತ್ತದೆ.

3. ಖಾನೇಷುಮಾರಿ 75 ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ನಂಜಪ್ಪರವರ ಖಾನೇಷುಮಾರಿ ಸಂಖ್ಯೆ 1 ಆಸ್ತಿಯ ಕುರಿತು ರಾಮಸ್ವಾಮಿರವರು ನನ್ನ ವಿರುದ್ದ ಪ್ರತ್ಯೇಕ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಹೊಸಕೋಟೆಯ ಹೆಚ್ಚುವರಿ ನ್ಯಾಯಾಲಯದಲ್ಲಿ ರಾಮಸ್ವಾಮಿರವರು ನನ್ನ ವಿರುದ್ದ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಲ್ಪ ಸಮಯದ ನಂತರ ದಾವೆ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರಾಮಸ್ವಾಮಿರವರು ದಾಖಲಿಸಿದ ದಾವೆ ತನಿಖೆಗೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ರಾಮಸ್ವಾಮಿರವರು ನನ್ನ ವಿರುದ್ದ ದಾಖಲಿಸಿರುವ ದಾವೆಯ ಕ್ರಮ ಸಂಖ್ಯೆ 59/2019 ಆಗಿರುತ್ತದೆ ಎಂದರೆ ಸರಿ. ಸದರಿ ರಾಮಸ್ವಾಮಿರವರು ನನ್ನ ವಿರುದ್ದ ದಾವೆ ದಾಖಲಿಸಿದ ನಂತರ ನಾನು ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ರಾಮಸ್ವಾಮಿರವರ ಖಾನೇಷುಮಾರಿ ಸಂಖ್ಯೆ 1 ಆಸ್ತಿಯನ್ನು ಕಬಳಿಸುವ ಸಲುವಾಗಿ ರಾಮಸ್ವಾಮಿರವರು ದಾವೆ ದಾಖಲಿಸಿದ ನಂತರ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ರಾಮಸ್ವಾಮಿರವರ ಖಾನೇಷುಮಾರಿ ಸಂಖ್ಯೆ 1 ಆಸ್ತಿಯನ್ನು ಅತಿಕ್ರಮ ಪ್ರವೇಶ ಮಾಡಿ, ಒತ್ತುವರಿ ಮಾಡಲು ಪ್ರಯತ್ನಿಸಿ ಕಟ್ಟಡ ನಿರ್ಮಿಸಲು ಹೋದಾಗ ಮೂಲ ದಾವೆ ಸಂಖ್ಯೆ 59/2019 ನ್ನು ನನ್ನ ವಿರುದ್ದ ದಾಖಲಿಸಲಾಗಿತ್ತು ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡ ನಿರ್ಮಿಸಲು ಹೋದಾಗ ನಮ್ಮ ಮತ್ತು ಪ್ರತಿವಾದಿಗಳ ನಡುವೆ ಗಲಾಟೆ ಆಗಿರುತ್ತದೆ ಎಂದರೆ ಸಾಕ್ಷಿಯು ಅವರು ಮನೆಕಟ್ಟಲು ಬಿಟ್ಟಿರುವುದಿಲ್ಲ ಆದ್ದರಿಂದ ನಾನು ಪೊ.ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಪೊ.ಠಾಣೆಗೆ ಹೋಗಿ ಯಾವುದೇ ದೂರು ನೀಡಿರುವುದಿಲ್ಲ ಮತ್ತು ರಾಮಸ್ವಾಮಿರವರು ಪೊ.ಠಾಣೆಗೆ ಹೋಗಿ ನನ್ನ ವಿರುದ್ದ ದೂರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಾಮಸ್ವಾಮಿರವರು ಪೊ.ಠಾಣೆಗೆ ದೂರು ನೀಡಿದ ನಂತರ ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಸದರಿ ಪೊ.ಠಾಣೆಯಲ್ಲಿ ನನಗೆ ಮನೆ ನಿರ್ಮಿಸದಂತೆ ತಿಳಿಸಿ ಮುಚ್ಚಳಿಕೆ ಬರೆಸಿಕೊಂಡಿದ್ದರು ಎಂದರೆ ಸರಿಯಲ್ಲ.

4. ನನ್ನ ತಾತ ಖರೀದಿಸಿರುವ ಖಾನೇಷುಮಾರಿ ಸಂಖ್ಯೆ 75 ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ನಂಜಪ್ಪ ರವರ ವಠಾರ ಎನ್ನುವ ಆಸ್ತಿಯ ಸಂಖ್ಯೆ 1 ಎಂದರೆ ಸರಿಯಲ್ಲ. 1957 ರಲ್ಲಿ ಸದರಿ ಪಶ್ಚಿಮ ದಿಕ್ಕಿನಲ್ಲಿರುವ ನಂಜಪ್ಪರವರ ವಠಾರದ ಆಸ್ತಿಯನ್ನು ನಂಜಪ್ಪರವರು ಖರೀದಿಸಿದ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ತಾತ ಮಾರಾಟ ಮಾಡಿದ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನಂಜಪ್ಪರವರ ಆಸ್ತಿಯ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂ-ನಂಜಪ್ಪರವರ ಖಾಲಿ ನಿವೇಶನ, ಪ-ಕುಂಟ ನಂಜಪ್ಪರವರ ವಠಾರ, ಉ-ಮಹಾಂತಯ್ಯನವರ ವಠಾರ ಮತ್ತು ದ-ಬೀರಹಳ್ಳಿ ನಾರಾಯಣಪ್ಪರವರ ವಠಾರ ಇರುತ್ತದೆ.

**<u>ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.